

ಲುಕೌಟ್ ಪರ್ವತ



ಗುಹೆಯೊಳಗಿನ ಶಿಲಾರಚನೆಗಳು

ಅವು ಎರಡು ದಶಲಕ್ಷ ವರ್ಷಗಳಿಂದ ಸಂಕೀರ್ಣ ರಾಸಾಯನಿಕ ಕ್ರಿಯೆಗಳಿಂದ ಆಗುತ್ತಿರುವಂಥವು. ಇದು ಜೀವಂತ ಗುಹೆಯಾದ್ದರಿಂದ, ನಿರಂತರವಾಗಿ ಈ ರಚನೆಗಳು ಬೆಳೆಯುತ್ತಲೇ ಇರುತ್ತವೆ ಮತ್ತು ಹೊಸ ರಚನೆಗಳು ಮೂಡುತ್ತಲೂ ಇರುತ್ತವೆ. ಗುಹೆಯ ಇಂಥ ರಚನೆಗಳನ್ನು ನೋಡುತ್ತಾ ಸುಮಾರು ಅರ್ಧ ಮೈಲು ಕ್ರಮಿಸಿದ ನಂತರ ಒಂದು ಕತ್ತಲ ಕೋಣೆ ತಲುಪಿದೆವು.

ನಾವು ತಲುಪಿದ ಕತ್ತಲ ಕೋಣೆಯಲ್ಲಿ ಜೋರಾದ ನೀರು ಬೀಳುವ ಶಬ್ದ ಬಿಟ್ಟರೆ ಮತ್ತೇನೂ ಕಾಣುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಕೋಣೆಯಲ್ಲಿ ಪ್ರಖರ ವಿದ್ಯುತ್ ಬೆಳಕು ಪ್ರವಹಿಸಿತು. ನೋಡುತ್ತೇವೆ, ಎದುರಿಗೆ ಆ ಗುಹೆಯೊಳಗೆ ಸುಮಾರು 145 ಅಡಿ ಎತ್ತರದಲ್ಲಿರುವ ಪರ್ವತದೊಳಗಿನ ದೊಡ್ಡ ರಂಧ್ರವೊಂದರಿಂದ ನೀರು ಧುಮುಕುತ್ತಿರುವ ಭವ್ಯ ಜಲಪಾತ ಪ್ರತ್ಯಕ್ಷವಾಯಿತು. ಅಲ್ಲಿ ನೆರೆದಿದ್ದವರೆಲ್ಲರಿಂದ ಹರ್ಷೋದ್ಗಾರಗಳು ಮೊಳಗಿದವು. ಅನೇಕರು ‘ಹೋ, ವಾಹ್’ ಎಂದು ಕೂಗಿದರು.

ಈ ಜಲಪಾತಕ್ಕೆ ಒಂದಾದ ಮೇಲೊಂದರಂತೆ ಕ್ಷಣಕ್ಷಣಕ್ಕೂ ಬದಲಾಗುವ ನೀಲಿ, ಕೆಂಪು, ಹಸಿರು, ನೇರಳೆ, ಕೇಸರಿ, ಹಳದಿ ಮೊದಲಾದ ವಿವಿಧ ಬಣ್ಣಗಳ ಪ್ರಖರವಾದ ವಿದ್ಯುತ್ ಬೆಳಕನ್ನು ಹಾಯಿಸಿ ತೋರಿಸಿದಾಗಲಂತೂ ಅದರ ಸೌಂದರ್ಯ ನೂರ್ಮಡಿ ಹೆಚ್ಚಿ ಅಲ್ಲಿ ಒಂದು ಗಂಧರ್ವಲೋಕವೇ ಸೃಷ್ಟಿಯಾಯಿತು. ಅದನ್ನು ನೋಡಿ ಮೈಮನಗಳು ಪುಳಕಗೊಂಡವು. ಇದುವರೆಗೂ ಭೂಮಿಯ ಮೇಲೆ ವಿವಿಧ ಎತ್ತರಗಳಿಂದ ಧುಮುಕುವ ಜಲಪಾತಗಳನ್ನು ಮಾತ್ರ ನೋಡಿದ್ದ ನನಗೆ ಭೂಗರ್ಭದೊಳಗಿನ ಈ ಜಲಪಾತ ನೋಡಿ ದಿಗ್ಭ್ರಮೆಯಾಯಿತು. ಅದರಲ್ಲೂ ಈ ಅಮೆರಿಕನ್ನರು ತಮ್ಮಲ್ಲಿರುವ ಇಂಥ ಪ್ರಕೃತಿ ವಿಸ್ಮಯಗಳನ್ನು ಪ್ರವಾಸಿಗರಿಗೆ ತೋರಿಸಲು ಮಾಡಿರುವ ವ್ಯವಸ್ಥೆಗಳಂತೂ ಅಪ್ರತಿಮ. ಈ ಪ್ರಕೃತಿಯಲ್ಲಿ ಎಂತೆಂಥ ವಿಸ್ಮಯಗಳಿವೆಯಲ್ಲಾ ಎಂದುಕೊಂಡೆ. ಈ ಅಪರೂಪದ ಜಲಪಾತದ ಸೌಂದರ್ಯವನ್ನು ಕಣ್ತುಂಬಿಕೊಂಡು ಅಲ್ಲಿಂದ ರೂಬಿ ಫಾಲ್ಸ್ ಕ್ಯಾಜಲ್‌ಗೆ ಹಿಂತಿರುಗಿದೆವು. ಈ ಜಲಪಾತದ ನೀರಿನ ಮೂಲ ಲುಕೌಟ್ ಪರ್ವತದ ಮೇಲೆ ಬೀಳುವ ಮಳೆ ಮತ್ತು ಪ್ರಪಾತದೊಳಗಿನ ನೀರಿನ ಒರತೆಯಂತೆ. ಜಲಪಾತದಿಂದ ಬಿದ್ದ ನೀರು ಹರಿದು ಹೋಗಿ ಟೆನೆಸ್ಸಿ ನದಿ ಸೇರಿಕೊಳ್ಳುತ್ತದೆ.

ರೂಬಿ ಜಲಪಾತವನ್ನು ಕಂಡುಹಿಡಿದುದರ ಹಿಂದೆ ಒಂದು ರೋಚಕ ಇತಿಹಾಸವೇ ಇದೆ. ಮೊದಲಿಗೆ, ಲುಕೌಟ್ ಪರ್ವತದ ಬುಡದೊಳಗಡೆಯೂ ರೂಬಿ ಜಲಪಾತಕ್ಕೆ ಹೋಗುವ ಮಾರ್ಗದಲ್ಲಿರುವ ಗುಹೆಯಲ್ಲಿರುವಂತಹದೇ ಸುಣ್ಣದ ಕಲ್ಲಿನ ಶಿಲಾರಚನೆಗಳನ್ನು ಹೊಂದಿದ ಒಂದು ಭೂಗರ್ಭ ಗುಹೆಯಿತ್ತು. ಅದನ್ನು ಲುಕೌಟ್ ಪರ್ವತದ ಗುಹೆ ಎಂದು ಕರೆಯುತ್ತಿದ್ದರು. ಆದರೆ 1905ರಲ್ಲಿ ಆ ಗುಹೆಯ ಪ್ರವೇಶ ದ್ವಾರದ ಬಳಿಯೇ ಹಾದು ಹೋಗಬೇಕಾದ ಒಂದು ರೈಲು ಮಾರ್ಗಕ್ಕಾಗಿ ಸುರಂಗ ತೋಡಬೇಕಾಗಿ ಬಂದದ್ದರಿಂದ, ಗುಹೆಯ ಪ್ರವೇಶದ್ವಾರವನ್ನು ಶಾಶ್ವತವಾಗಿ ಮುಚ್ಚಿಬಿಟ್ಟರು. ಹಾಗಾಗಿ, ಪ್ರವಾಸಿಗಳಿಗೆ ಆ ಗುಹೆಯ ವೀಕ್ಷಣೆಯ ಅವಕಾಶ ಶಾಶ್ವತವಾಗಿ ತಪ್ಪಿ ಹೋಯಿತು. ಇದನ್ನು ಮನಗಂಡ ಚಟನೂಗ ನಗರದ ನಿವಾಸಿ ಲಿಯೋ ಲ್ಯಾಂಬರ್ಟ್ ಎಂಬ ಭೂಗರ್ಭ ಗುಹಾ ಸಂಶೋಧಕ 1920ರ ದಶಕದಲ್ಲಿ ಪುನಃ ಈ ಗುಹೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಿ, ಪ್ರವಾಸಿಗಳಿಗೆ ವೀಕ್ಷಿಸುವ ಅವಕಾಶ ಮಾಡಿಕೊಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಒಂದು ಕಂಪನಿಯನ್ನು ಸ್ಥಾಪಿಸಿದ ಮತ್ತು ಹೂಡಿಕೆದಾರರಿಂದ 2,50,000 ಡಾಲರ್ ಬಂಡವಾಳವನ್ನೂ ಸಂಗ್ರಹಿಸಿದ. ಪರ್ವತದ ಮೇಲ್ಭಾಗದಿಂದ ಒಂದು ಸುರಂಗ ಕೊರೆದು, ಒಂದು ಎಲಿವೇಟರ್ ಅಳವಡಿಸಿ, ಅದರ ಮೂಲಕ ಪ್ರವಾಸಿಗಳನ್ನು ಲುಕೌಟ್ ಪರ್ವತದ ಗುಹೆಗೆ ಕರೆದೊಯ್ಯಬೇಕೆಂಬುದು ಅವನ ಯೋಜನೆಯಾಗಿತ್ತು. ಈ ಯೋಜನೆಗಾಗಿ ಲುಕೌಟ್ ಪರ್ವತದ ಮೇಲ್ಭಾಗದಲ್ಲಿನ ಒಂದಷ್ಟು ಜಾಗವನ್ನೂ ಖರೀದಿಸಿದ.

1928ರಲ್ಲಿ ಲುಕೌಟ್ ಪರ್ವತದ ಮೇಲ್ಭಾಗದಿಂದ ಕಾರ್ಮಿಕರಿಂದ ಲುಕೌಟ್ ಪರ್ವತದ ಗುಹೆಗೆ ಎಲಿವೇಟರ್ ಅಳವಡಿಸುವ ಸುರಂಗ ಕೊರೆಸಲಾರಂಭಿಸಿದ. ಸುಣ್ಣದ ಕಲ್ಲಿನ ಆ ಪರ್ವತದಲ್ಲಿ ಸುರಂಗ ಕೊರೆಯುವುದು ತುಂಬಾ ಕಠಿಣದ ಕೆಲಸವಾಗಿತ್ತು. ಸುಮಾರು 1120 ಅಡಿ ಆಳಕ್ಕೆ ಕೊರೆದಾಗ ಅಲ್ಲಿ 18 ಅಂಗುಲ ಎತ್ತರ 4 ಅಡಿ ಅಗಲದ ಒಂದು ರಂಧ್ರ ಕಂಡಿತು. ಅದರಿಂದ ತಣ್ಣನೆಯ ಅನಿಲ ಹೊರಬರುತ್ತಿತ್ತು. ಇದೇನಿರಬಹುದೆಂಬ ಕುತೂಹಲದಿಂದ ಲ್ಯಾಂಬರ್ಟ್ ಜೊತೆಗೊಬ್ಬನನ್ನು ಕರೆದುಕೊಂಡು, ಆ ರಂಧ್ರದೊಳಕ್ಕೆ ಇಳಿದ. ಅಲ್ಲೂ ಒಂದು ತೀರ ಇಕ್ಕಟ್ಟಾದ ಗುಹೆ ಕಂಡಿತು. ಆ ಕತ್ತಲ ಗುಹೆಯಲ್ಲೇ ತೆವಳಿಕೊಂಡು ಹೋಗಿ 17 ಗಂಟೆಗಳ ನಂತರ ಹಿಂತಿರುಗಿ ಬಂದು ತಾನು ಕಂಡ ಅದ್ಭುತ ಜಲಪಾತದ ಬಗ್ಗೆ, ಅವನಿಗಾಗಿ ಕಾಯುತ್ತಿದ್ದ ಇತರರಿಗೂ ತಿಳಿಸಿದ. ಮಾರನೇ ದಿನ, ತನ್ನ ಪತ್ನಿ ರೂಬಿ ಲಿಸ್ಸೆಯನ್ನೂ ಕರೆದುಕೊಂಡು ಹೋಗಿ ಆ ಜಲಪಾತ ತೋರಿಸಿದ ಮತ್ತು ಆ ಜಲಪಾತಕ್ಕೆ ತನ್ನ ಪತ್ನಿಯ ಹೆಸರನ್ನೇ ನಾಮಕರಣ ಮಾಡಿದ.

ಮತ್ತೂ ಸುರಂಗ ಕೊರೆತವನ್ನು ಮುಂದುವರೆಸಿದಾಗ ಅಲ್ಲಿಂದ 160 ಅಡಿ ಕೆಳಗಡೆ ಲುಕೌಟ್ ಪರ್ವತದ ಗುಹೆಯೂ ಸಿಕ್ಕಿತು. ರೂಬಿ ಜಲಪಾತದ ಗುಹೆಯಿಂದ 360 ಅಡಿ ಮೇಲ್ಭಾಗದಲ್ಲಿ, ಸುಂದರವಾದ ರೂಬಿ ಫಾಲ್ಸ್ ಕ್ಯಾಜಲ್ ಎಂಬ ಕಟ್ಟಡ ನಿರ್ಮಿಸಿ, ಅಲ್ಲಿಂದಲೇ ಎರಡೂ ಗುಹೆಗಳನ್ನು ತಲುಪಲು ಗಾಜಿನ ಮುಂಬಾಗಿಲಿರುವ ಎಲಿವೇಟರನ್ನು ಅಳವಡಿಸಿದ. ಈ ಕ್ಯಾಜಲ್ ಕಟ್ಟಿದ್ದು, ಸುರಂಗ ಕೊರೆದಾಗ ಹೊರತೆಗೆದ ಸುಣ್ಣದ ಕಲ್ಲುಗಳಿಂದಲೇ.

1929ರ ಡಿಸೆಂಬರ್ ತಿಂಗಳಲ್ಲಿ ಲುಕೌಟ್ ಗುಹೆ ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿದ. ರೂಬಿ ಫಾಲ್ಸ್ ಗುಹೆ ವೀಕ್ಷಿಸಲು ಅನುಕೂಲವಾಗುವಂತೆ ಕಾಬಲ್ ಸ್ಟೋನ್ ಹಾದಿ, ವಿದ್ಯುತ್ ದೀಪಗಳ ಅಳವಡಿಕೆ, ಜಲಪಾತದ ಬಳಿ ವೀಕ್ಷಣೆಗೆ ವಿಶಾಲ ಜಾಗ ನಿರ್ಮಿಸಿ 1930ರ ಜೂನ್‌ನಲ್ಲಿ ರೂಬಿ ಜಲಪಾತ ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿದ. ಈ ಎಲ್ಲ ಅನುಕೂಲಗಳನ್ನು ಕಲ್ಪಿಸಿದ್ದರಿಂದ, ಲ್ಯಾಂಬರ್ಟ್ ಮೊದಲ ಬಾರಿಗೆ ಜಲಪಾತಕ್ಕೆ ಹೋಗಿ ಬರಲು ತೆಗೆದುಕೊಂಡಿದ್ದ 17 ಗಂಟೆ ಬದಲು, ಈಗ ಕೇವಲ ಒಂದೂವರೆ ಗಂಟೆಯಲ್ಲಿ ಹೋಗಿ ಬರಬಹುದು. ಬರಬರುತ್ತಾ ರೂಬಿ ಫಾಲ್ಸ್ ಆಕರ್ಷಣೆ ಹೆಚ್ಚಾಗಿ, ಲುಕೌಟ್ ಗುಹೆ ನೋಡುಗರು ಕಡಿಮೆಯಾದ್ದರಿಂದ, 1935ರಲ್ಲಿ ಅದನ್ನು ಶಾಶ್ವತವಾಗಿ ಮುಚ್ಚಲಾಯಿತು. ರೂಬಿ ಫಾಲ್ಸ್ ನೋಡಲು ವರ್ಷಕ್ಕೆ ಸುಮಾರು ಐದು ಲಕ್ಷ ಜನ ಬರುತ್ತಾರಂತೆ.